**ಕುವೈತ್‌ನಲ್ಲಿ ನಡೆದ 'ಹಾಲಾ ಮೋದಿ' ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದರು**

ಡಿಸೆಂಬರ್ 21, 2024

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಕುವೈತ್‌ನ ಶೇಖ್ ಸಾದ್ ಅಲ್-ಅಬ್ದುಲ್ಲಾ ಒಳಾಂಗಣ ಕ್ರೀಡಾ ಸಂಕೀರ್ಣದಲ್ಲಿ ನಡೆದ 'ಹಾಲಾ ಮೋದಿ' ವಿಶೇಷ ಕಾರ್ಯಕ್ರಮದಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದರು. ಕುವೈತ್‌ನಲ್ಲಿರುವ ಸಮುದಾಯದ ವಿಭಿನ್ನ ವರ್ಗವನ್ನು ಪ್ರತಿನಿಧಿಸುವ ಭಾರತೀಯ ನಾಗರಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

2.ಪ್ರಧಾನಮಂತ್ರಿ ಅವರನ್ನು ಸಮುದಾಯವು ಅಸಾಧಾರಣ ಪ್ರೀತಿ ಮತ್ತು ತುಂಬಿದ ಉತ್ಸಾಹದೊಂದಿಗೆ ಸ್ವಾಗತಿಸಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿಯವರು, ಭಾರತ-ಕುವೈತ್ ಬಾಂಧವ್ಯವನ್ನು ಭಾರತೀಯ ಸಮುದಾಯವು ಗಾಢವಾಗಿ ಶ್ರೀಮಂತಗೊಳಿಸಿದೆ, ಇದು ಎರಡು ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕುವೈತ್ ಅಮೀರ್ ಅವರ ಘನ ಆಹ್ವಾನಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದ ಅವರು, ಹಳೆಯ ಸ್ನೇಹವನ್ನು ಬಲಪಡಿಸಲು ಮತ್ತು ಗಟ್ಟಿಗೊಳಿಸಲು 43 ವರ್ಷಗಳ ನಂತರ ಭಾರತೀಯ ಪ್ರಧಾನಿಯೊಬ್ಬರು ಕುವೈತ್‌ಗೆ ಭೇಟಿ ನೀಡುತ್ತಿರುವುದಾಗಿ ಹೇಳಿದರು.

3. ಕುವೈತ್ ಅಭಿವೃದ್ಧಿಗೆ ಸಮುದಾಯದ ಕಠಿಣ ಪರಿಶ್ರಮ, ಸಾಧನೆ ಮತ್ತು ಕೊಡುಗೆಯನ್ನು ಪ್ರಧಾನ ಮಂತ್ರಿ ಪ್ರಶಂಸಿಸಿದರು, ಇದನ್ನು ಸ್ಥಳೀಯ ಸರ್ಕಾರ ಮತ್ತು ಸಮಾಜದಿಂದ ವ್ಯಾಪಕವಾಗಿ ಗುರುತಿಸಲ್ಪಟ್ಟಿದೆ ಎಂದು ಅವರು ಹೇಳಿದರು. ಭಾರತೀಯ ಸಮುದಾಯದ ಕಲ್ಯಾಣಕ್ಕಾಗಿ ಕುವೈತ್ ನಾಯಕತ್ವಕ್ಕೆ ಅವರು ಧನ್ಯವಾದ ಸಲ್ಲಿಸಿದರು. ಕುವೈತ್ ಮತ್ತು ಗಲ್ಫ್‌ನ ಇತರೆಡೆಗಳಲ್ಲಿ ಭಾರತೀಯ ಕಾರ್ಮಿಕರನ್ನು ಬೆಂಬಲಿಸಲು ಭಾರತದ ಬಲವಾದ ಬದ್ಧತೆಯನ್ನು ಪ್ರತಿಬಿಂಬಿಸಿದ ಅವರು, ಅನೇಕ ಕ್ರಮಗಳೊಂದಿಗೆ ಇ-ಮೈಗ್ರೇಟ್ ಪೋರ್ಟಲ್‌ನಂತಹ ಸರ್ಕಾರವು ಕೈಗೊಂಡ ತಂತ್ರಜ್ಞಾನ ಆಧಾರಿತ ಉಪಕ್ರಮಗಳ ಕುರಿತು ಮಾತನಾಡಿದರು.

4. ಪ್ರಧಾನಮಂತ್ರಿಯವರು ಭಾರತದ ರೀತಿಯನ್ನು "ವಿಶ್ವಬಂಧು", ಜಗತ್ತಿಗೆ ಸ್ನೇಹಿತ ಎಂದು ವಿವರಿಸಿದರು.  ಅವರು ವಿಶೇಷವಾಗಿ ತಂತ್ರಜ್ಞಾನ, ಮೂಲಸೌಕರ್ಯ ಮತ್ತು ಸುಸ್ಥಿರತೆಯ ಕ್ಷೇತ್ರಗಳಲ್ಲಿ ಭಾರತದ ತ್ವರಿತ ಪ್ರಗತಿ ಮತ್ತು ಪರಿವರ್ತನೆಯ ಬಗ್ಗೆ ವಿವರಿಸಿದರು. ವಿಶ್ವದ 5 ನೇ ಅತಿದೊಡ್ಡ ಆರ್ಥಿಕತೆಯ ಹೊರತಾಗಿ, ಭಾರತವು ಫಿನ್‌ಟೆಕ್‌ನಲ್ಲಿ ಜಾಗತಿಕ ನಾಯಕ ಸ್ಥಾನದಲ್ಲಿದ್ದು, ಸ್ಟಾರ್ಟ್-ಅಪ್ ಕ್ಷೇತ್ರದಲ್ಲಿ ಮೂರನೇ ಅತಿದೊಡ್ಡ ಜಾಗತಿಕ ಸ್ಥಾನದಲ್ಲಿದೆ

ಮತ್ತು ವಿಶ್ವದಾದ್ಯಂತ ಹೆಚ್ಚು ಡಿಜಿಟಲ್ ಸಂಪರ್ಕ ಹೊಂದಿದ ಸಮಾಜಗಳನ್ನು ಹೊಂದಿರುವುದರಲ್ಲಿ ಒಂದಾಗಿದೆ ಎಂದು ಅವರು ಉಲ್ಲೇಖಿಸಿದರು.  ಅವರು ಹಣಕಾಸಿನ ಒಳಗೊಳ್ಳುವಿಕೆ, ಮಹಿಳೆಯರ ನೇತೃತ್ವದೊಂದಿಗೆ ಅಭಿವೃದ್ಧಿ ಮತ್ತು ಒಳಗೊಳ್ಳುವ ಬೆಳವಣಿಗೆಯಂತಹ ಸಾಧನೆಗಳನ್ನು ಎತ್ತಿ ಹಿಡಿದರು.  ವಿಕ್ಷಿತ್ ಭಾರತ್ ಮತ್ತು ಹೊಸ ಕುವೈತ್‌ನ ಉಭಯ ದೇಶಗಳ ಹಂಚಿಕೆಯ ಆಕಾಂಕ್ಷೆಗಳ ಮೇಲೆ ಬೆಳಕು ಚೆಲ್ಲಿದ ಅವರು, ಭಾರತ ಮತ್ತು ಕುವೈತ್ ಒಟ್ಟಿಗೆ ಕೆಲಸ ಮಾಡಲು ದೊಡ್ಡ ಅವಕಾಶಗಳಿವೆ ಎಂದು ಒತ್ತಿ ಹೇಳಿದರು.  ಭಾರತದ ಕೌಶಲ್ಯ ಸಾಮರ್ಥ್ಯಗಳು ಮತ್ತು ನಾವೀನ್ಯತೆಯು ಎರಡು ದೇಶಗಳ ನಡುವೆ ಹೊಸ ಪಾಲುದಾರಿಕೆಯನ್ನು ಉತ್ತೇಜಿಸುತ್ತದೆ.

5. ಪ್ರಧಾನ ಮಂತ್ರಿಗಳು ಜನವರಿ 2025 ರಲ್ಲಿ ಭಾರತದಲ್ಲಿ ನಡೆಯುವ ಪ್ರವಾಸಿ ಭಾರತೀಯ ದಿವಸ ಮತ್ತು ಮಹಾ ಕುಂಭದಲ್ಲಿ ಭಾಗವಹಿಸಲು ಕುವೈತ್‌ನಲ್ಲಿ ನೆಲೆಸಿರುವ ಭಾರತೀಯರಿಗೆ ಆಹ್ವಾನವನ್ನು ಇತ್ತರು.

ಕುವೈತ್ ಸಿಟಿ

ಡಿಸೆಂಬರ್ 21, 2024